<u>ಸಿ.ಡಬ್ಲ್ಯೂ-1</u>

<u>ದಿನಾಂಕಃ **19-12-2023** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ಪಾಟೀ ಸವಾಲು ಶ್ರೀ ಕೆ.ಸಿ.ಎಸ್. ವಕೀಲರಿಂದಃ-</u>

ನಾನು ಸರ್ವೆ ಮಾಡುವಾಗ ಸರ್ವೆ ನಂ. **16/1** ರ ಮಾಲೀಕರಿಗೆ ನೋಟೀಸನ್ನು ಕೊಟ್ಟಿಲ್ಲ. ನಾನು ಕೋರ್ಟ್ ಆದೇಶದ ಪ್ರಕಾರ ನನ್ನ ಕೆಲಸ ಮಾಡಿದ್ದೇನೆ. ಆ ದಿನ ಸರ್ವೆ ನಂ.**16/1** ರ ಮಾಲೀಕರು ಸರ್ವೆ ಮಾಡುವಾಗ ಹಾಜರಿರಲಿಲ್ಲ. ನನಗೆ ಕಮೀಷನರ್ ವಾರೆಂಟ್ ಜೊತೆ ಎದುರಾಳಿಯಮೆಮೋ ಆಫ್ ಇನ್ಸಸ್ಟಕ್ಷನ್ ಫೈಲ್ ಸಮೇತ ಬಂದಿತ್ತು. ವಾದಿಯಮೆಮೋ ಆಫ್ ಇನ್ಸಸ್ಟಕ್ಷನ್ ನಾನು ಅಳತೆ ಮುಗಿಸಿಕೊಂಡು ಬಂದ ನಂತರ ಅವರ ವಕೀಲರು ತಂದು ಕೊಟ್ಟಿರುತ್ತಾರೆ. ನ್ಯಾಯಾಲಯದಿಂದ ಬಂದಿಲ್ಲ. ನಾನು ಸರ್ವೆ ನಂ.**16/1** ನ್ನು ಅಳತೆ ಮಾಡಿಲ್ಲ. ನೀವು ಸರ್ವೆ ನಂ.**16/1** ರ ಮಾಲೀಕರಿಗೆ ನೋಟೀಸು ಕೊಟ್ಟಿಲ್ಲ, ಅಳತೆ ಮಾಡಿಲ್ಲ ಆದರೆ ರಿಪೋರ್ಟ್ ನಲ್ಲಿ ಅದನ್ನು ಅಳತೆ ಮಾಡಿರುವ ಬಗ್ಗೆ ಬರೆದಿದ್ದೀರಾ ಅದು ಸುಳ್ಳು ಅಲ್ವಾ ಎನ್ನುವ ಪ್ರಶ್ನೆಗೆ ಸಾಕ್ಷಿ ಹೌದು ಎಂದು ತಲೆಯಾಡಿಸುತ್ತಾರೆ. ನೀವು ನಿಮ್ಮ ರಿಪೋರ್ಟ್ ನಲ್ಲಿ **5** ನೇ ಪಾಯಿಂಟ್ ನಲ್ಲಿ ಸರ್ವೆ ನಂ.**16/1** ಮತ್ತು **17/2** ರ ಗಡಿಗಳನ್ನು ಅಳತೆ ಮಾಡಿ ಗುರುತು ಮಾಡಿದೆ ಅದರಂತೆ ನಕ್ಷೆ ತಯಾರಿಸಿದೆ ಎಂದು ಬರೆದಿದ್ದೀರಾ ಅದು ಸರಿನಾ ತಪ್ಪಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಸರ್ವೆ ನಂ.**17/2** ಮಾತ್ರ ಅಳತೆ ಮಾಡಿದ್ದೇನೆ ಹಾಗೂ ಅದರ ನಕ್ಷೆಯನ್ನು ಹಾಜರುಮಾಡಿದ್ದೇನೆ ಎಂದು ಹೇಳುತ್ತಾರೆ. ಮುಂದುವರೆದು ಸಾಕ್ಷಿಯು ಕ್ರಯಪತ್ರದಲ್ಲಿ ಸರ್ವೆ ನಂ ತಪ್ಪಾಗಿ ಬರೆಯಲಾಗಿದೆ ಎಂದು ಸಾಕ್ಷಿ ಹೇಳುತ್ತಾರೆ. ನನ್ನ ಎದುರಾಳಿ ಪರವಾಗಿ ಸಲ್ಲಿಸಿದ ಸೂಚನಾ ಪತ್ರಕ್ಕೆ ಉತ್ತರ ನಂ**2** ಸರಿಯಾಗಿರುತ್ತದೆ. ನಾನು ಈಗ **8** ವರ್ಷಗಳಿಂದ ಸರ್ವೆಯರ್ ಆಗಿ ಕೆಲಸ ಮಾಡುತ್ತಿದ್ದೇನೆ. **2** ಸರ್ವೆ ನಂಬರ್ ಒಂದೇ ಚೆಕ್ ಬಂಧಿ ಬರಲು ಸಾಧ್ಯವೇ ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲಾ ಬೇರೆ ಬೇರೆ ಚೆಕ್ ಬಂಧಿ ಬರುತ್ತದೆ ಎಂದು ನುಡಿಯುತ್ತಾರೆ. ನೀವು ಸರ್ವೆ ನಂ.**17/2** ರ ಅಳತೆ **2** ಎಕರೆ **36** ಗುಂಟೆಗಳು ಎಂದು ಹೇಳುತ್ತೀರಾ ಹಾಗೂ ಸರ್ವೆ ನಂ.**17/4** ಇದರ ಅಳತೆಯು **1** ಎಕರೆ **16** ಗುಂಟೆ ಎಂದು ಹೇಳುತ್ತೀರಾ ಆದರೆ ನೀವು **3** ನೇ ಉತ್ತರದಲ್ಲಿ ಸದರಿ ಆಸ್ತಿಗಳಿಗೆ ಒಂದೇ ಚೆಕ್ ಬಂಧಿ ತೋರಿಸಿದ್ದೀರಾ ಅದು ತಪ್ಪು ಎನ್ನುವ ಪ್ರಶ್ನೆಗೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ.

ಮುಂದುವರೆದು ಸಾಕ್ಷಿಯು ಬೇರೆ ಬೇರೆ ಸರ್ವೆ ನಂಬರ್ ಆದರೆ ಚೆಕ್ ಬಂಧಿ ಬೇರೆ ಯಾಗುತ್ತದೆ ಆದರೆ ಒಂದೇಸರ್ವೆ ನಂಬರ್ ನಲ್ಲಿ **2** ಪೋಡ್ ಗಳು ಆದಾಗ ಹಾಗೂ ಅವು ಅಕ್ಕ ಪಕ್ಕದಲ್ಲಿದ್ದಾಗ ಅದರ ಚೆಕ್ ಬಂಧಿ ಒಂದೇ ಆಗಿರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ದಿ:**20-03-2023** ರಂದು ನಾನು ಸರ್ವೆ ಕೆಲಸವನ್ನು ಮಾಡಿರುತ್ತೇನೆ. ಪ್ರತಿವಾದಿಗಳು ದಿ:**06-09-2022** ಹಾಗೂ **13-11-2022** ರಂದು **2** ಬಾರಿ ತಮ್ಮ ಮೆಮೋ ಆಫ್ ಇನ್ಸಸ್ಟ್ರಕ್ಷನ್ ಕೊಟ್ಟಿದ್ದು ಅದು ನಿಮ್ಮ ಗಮನಕ್ಕೆ ಬಂದಿದ್ದರೂ ಕೂಡ ಅದನ್ನು ತಡವಾಗಿ ನಿಮಗೆ ಕೊಟ್ಟಿದ್ದೀರಾ ಎಂದು ಸುಳ್ಳು ಹೇಳುತ್ತಿದ್ದೀರಾ ಎನ್ನುವುದು ಸರಿಯಲ್ಲ. ಅದು ನನ್ನ ಕಡತದಲ್ಲಿ ಬಂದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಾನು  ನನಗೆ ಮೆಮೋ ಆಫ್ ಇನ್ಸಸ್ಟ್ರಕ್ಷನ್ ಸಿಕ್ಕಿಲ್ಲ ಎಂದು ಕಾರಣ ಹಿಡಿದುಕೊಂಡು ಅದನ್ನು ಪಾಲಿಸದೇ ಸರ್ವೆ ಕೆಲಸ ಮಾಡಿದ್ದೇನೆ ಎನ್ನುವುದು ಸುಳ್ಳು. ನನಗೆ ಎರಡೂ ಪಕ್ಷಗಾರರ ಮೆಮೋ ಆಫ್ ಇನ್ಸಸ್ಟ್ರಕ್ಷನ್ ಹಾಗೂ ಫೈಲ್ ಸರಿಯಾದ ಸಮಯದಲ್ಲಿ ಸಿಕ್ಕಿದ್ದರೂ ಕೂಡ ನಾನು ಈ ಅಪೀಲಿನ ಎದುರುದಾರರ ಮಾತನ್ನು ಕೇಳಿ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸರಿಯಾಗಿ ಅಳತೆಗಳನ್ನು ಮಾಡಿಲ್ಲ ಹಾಗೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದು ಹೇಳುವುದು ಸರಿಯಲ್ಲ. ಈ ಕೇಸಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಕರ್ನಾಟಕ ಹೈ ಕೋರ್ಟ್ ನಿಂದ ಒಂದು ಆದೇಶ ಆಗಿತ್ತು ಆ ಆದೇಶ ನಿಮಗೆ ತಲುಪಿದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಅದು ಫೈಲ್ ನಲ್ಲಿತು ಎಂದು ಹೇಳುತ್ತಾರೆ. ಮೆಮೋ ಆಫ್ ಇನ್ಸಸ್ಟ್ರಕ್ಷನ್ ನನಗೆ ಸಿಗದೇ ಇರುವ ಕಾರಣದಿಂದ ಸರ್ವೆ ಕೆಲಸ ಅಪೂರ್ಣವಾಗಿದೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಅನಿತ, ಜಿ. )**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **19-12-2023.**